International Journal of Kannada Research
www.kannadajournal.com

ISSN: 2454–5813
IJSR 2017; 3(2): 10-11
© 2017 IJKS
www.kannadajournal.com
Received: 03-02-2017
Accepted: 04-03-2017

**ಸಂಶೋಧನಾ ವಿದ್ಯಾರ್ಥಿ**
ರಮೇಶ ಲ. ಪರೀಟ ರಾಣಿ ಚನ್ನಮ್ಮಾ ವಿಶ್ವ ವಿದ್ಯಾನಿಲಯ, ಬೆಳಗಾವಿ.

**ಮಾರ್ಗದರ್ಶಕರು**
ಡಾ॥ ಕೆ.ಆರ್. ಸಿದ್ಧಗಂಗಮ್ಮಾ
ಕನ್ನಡ ವಿಭಾಗದ ಮುಖ್ಯಸ್ಥರು
ಅಂಗರಾಜ ಮಹಾವಿದ್ಯಾಲಯ, ಬೆಳಗಾವಿ.

**Correspondence**
**ಸಂಶೋಧನಾ ವಿದ್ಯಾರ್ಥಿ**
ರಮೇಶ ಲ. ಪರೀಟ ರಾಣಿ ಚನ್ನಮ್ಮಾ ವಿಶ್ವ ವಿದ್ಯಾನಿಲಯ, ಬೆಳಗಾವಿ.

# ಶ್ರೀ ಜಗದ್ಗುರು ರೇವಣಸಿದ್ದರ ಜಗದೋದ್ಧಾರದ ಕಾರ್ಯಗಳು

**ಸಂಶೋಧನಾ ವಿದ್ಯಾರ್ಥಿ, ಮಾರ್ಗದರ್ಶಕರು**

ಶ್ರೀ ಜಗದ್ಗುರು ರೇವಣಸಿದ್ಧರು ಆಧ್ಯಾತ್ಮ ಲೋಕದ ಸೂರ್ಯ, ಸಿದ್ಧಿಗಳನ್ನು ಸಾಧಿಸಿದ ಸಾಧಕ, ನೊಂದು ಬೆಂದವರ ಬಾಳಿಗೆ ಬೆಂಗಾವಲಾಗಿ ಜೀವ ತಂದವರು. ಧರ್ಮದರ್ಶನಗಳ ಅರಿವುಂಟು ಮಾಡಿ. ಮಲಗಿದವರನ್ನು ಧರ್ಮ ಮರೆತ ಹುಚ್ಚರನ್ನು ಎಚ್ಚರಿಸಿದವರು. ಅರಿವನ್ನು ಆವುಗೆ ಮಾಡಿಕೊಂಡು ಜ್ಞಾನ ಪಾಂಡಿತ್ಯವನ್ನು ದಂಡವಾಗಿ ಹಿಡಿದುಕೊಂಡು ಕಚ್ಚಾಡುವ ಜನರನ್ನು ಬಡಿದೆಚ್ಚರಿಸುತ್ತ ಮಡದಿ ಮಕ್ಕಳು ಪಡೆದ ದ್ರವ್ಯವು ಎನ್ನೊಡವೆ ಎಂದು ನೆಚ್ಚಿ ಕುಳಿತ ಹುಚ್ಚರಿಗೆ ಎಚ್ಚರಿಕೆ ಗಂಟೆ ಬಾರಿಸಿದರು. ವೀರಶೈವ ಸಮಾಜ ಅಸ್ತವ್ಯಸ್ಥವಾಗಿ ಬಿದ್ದಂತಹ ಪರಿಸ್ಥಿತಿ. ಅದನ್ನು ಅಚ್ಚುಕಟ್ಟಾಗಿ ಕಟ್ಟಿ ಬೆಳೆಸಲು ಬಂದವರೆ ಶ್ರೀ ಜಗದ್ಗುರು ರೇವಣಸಿದ್ದರು[1] ಬಸವಾದಿ ಶಿವಶರಣರ ಹಿರಿಯ ಸಮಕಾಲೀನರಾದ ರೇವಣಸಿದ್ದರು ಅನುಭಾವಿಗಳಗೆಂದು ತಮ್ಮ ನೇತೃತ್ವದಲ್ಲಿ ಮಂಗಳವಾಡದ ಪುಣ್ಯ ನೆಲದಲ್ಲಿ ಚೆಂಗಣಿಗಿಲ ಮಂಟಪವನ್ನು ಕಟ್ಟುತ್ತಾರೆ. ಬಹುಶಃ ಇದನ್ನು ಅಧ್ಯಯನ ಮಾಡಿದ ಜಗಜ್ಯೋತಿ ಬಸವಣ್ಣನವರು ಇದೇ ಮಾದರಿಯಲ್ಲಿ ಅನುಭವ ಮಂಟಪ"ವನ್ನು ಕಟ್ಟಿರುವ ಸಾಧ್ಯತೆ ಇರುವದನ್ನು ಕಾಣಬಹುದಾಗಿದೆ.[2]

ಜಗದುದ್ಧಾರದ ಉದ್ಯೋಗವನ್ನು ಕೈಗೊಂಡು ಆಹಾರ ನೀರಡಿಕೆಗಳನ್ನು ಮೆಟ್ಟಿನಿಂತು. ನಿದ್ರೆ ವಿಶ್ರಾಂತಿಗಳನ್ನು ಲೆಕ್ಕಿಸದೆ ಸಮಾಜದಲ್ಲಿ ಜನಸಾಮಾನ್ಯರಿಗೆ ಎಲ್ಲಿ ಅನ್ಯಾಯವಾಗುತ್ತದೆಯೋ ಅಲ್ಲಿಗೆ ಧಾವಿಸಿ, ಬಡವ ಬಲ್ಲಿದರೆನ್ನದೇ ನ್ಯಾಯ ಸಮ್ಮತಗೊಳಿಸಿ, ಅರಮನೆ –ಗುರುಮನೆ, ಗುಡಿಸಲುಗಳಿಗೆ ಪಾದ ಬೆಳಸಿ, ವೀರಶೈವ ಧರ್ಮವನ್ನು ಜಗದಗಲ ಮಿಗೆಯಗಲ ಹರಡಿಸಿದ ಕೀರ್ತಿ ಜಗದ್ಗುರು ರೇವಣಸಿದ್ಧರಿಗೆ ಸಲ್ಲುತ್ತದೆ.[3] ಇಂತಹ ಅನುಪಮ ಚರಿತೆಯನ್ನು ಹೊಂದಿದಂತಹ ಜಗದ್ಗುರು ರೇವಣಸಿದ್ದರು ಜನಮಾನಸವನ್ನು ಗೆದ್ದವರು. ಇವರ ಕುರಿತು ಶಾಸನಗಳು, ಶಿಲ್ಪಗಳು ವಚನ, ಕಾವ್ಯ, ಪುರಾಣ, ಚರಿತ್ರೆ, ಜನಪದ ಸಾಹಿತ್ಯದಲ್ಲಿ ಇಡಿಯಾಗಿ ಬಿಡಿಯಾಗಿ ಇವರ ಲೋಕಪಾವನ ಚರಿತೆಯು ಮೂಡಿ ಬಂದಿರುವದನ್ನು ಕಾಣಬಹುದು. ಶ್ರೀ ಜಗದ್ಗುರು ರೇವಣಸಿದ್ಧರ ಹೆಸರಿನಲ್ಲಿ ದೇವಾಲಯಗಳು ಸ್ಮಾರಕಗಳು ತಲೆಯತ್ತಿರುವುದನ್ನು ನೋಡಬಹುದು. ಅದರಲ್ಲಿ ಕೆಲವು ಉದಾಹರಣೆಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆಯಲ್ಲಿನ ರಾಮನಗರದ ಹತ್ತಿರದ ರೇವಣಸಿದ್ದೇಶ್ವರ ಬೆಟ್ಟ. ಶಿವಗಂಗಾ ಕ್ಷೇತ್ರದಲ್ಲಿನ ರೇವಣಸಿದ್ದೇಶ್ವರ ದೇವಾಲಯ, ತುಮಕೂರು ಜಿಲ್ಲೆಯ ಸಿದ್ದರಬೆಟ್ಟ ಕಲಬುರಗಿ ಜಿಲ್ಲೆಯ ರಟಗಲ್, ಬೆಳಗಾವಿ ಜಿಲ್ಲೆಯ ಬೆಂಡವಾಡ, ಮೂಡಲಗಿ, ಹುಣಸೇವಾರಿ, ಸೊಲ್ಲಾಪುರ, ಹೊರ್ತಿ, ಮಾಸನೂರ, ಮಂಗಳವಾಡ, ಕೊಲ್ಲಿಪಾಕಿ, ಕಂಚಿ, ಹಾವಿನಹಾಳ, ಸಿದ್ದಗಿರಿ ಮುಂತಾದ ಕಡೆಗಳಲ್ಲಿ ಶ್ರೀ ರೇವಣಸಿದ್ಧೇಶ್ವರರ ಕುರುಹುಗಳನ್ನು ಇಂದಿಗೂ ಕಾಣಬಹುದು.[4]

ರೇವಣಸಿದ್ದರು ಅತ್ಯಂತ ಪ್ರಭಾವಿಗಳು. ಇವರ ಕುರಿತು ಸಾಹಿತ್ಯ ಕೃತಿಗಳು ರಚನೆಯಾಗಿವೆ. ಹರಿಹರ ಕವಿಯು (ಕ್ರಿ.ಶ. 1210) ರೇವಣಸಿದ್ದೇಶ್ವರ ರಗಳೆಯನ್ನು ರಚಿಸಿದ್ದಾರೆ. ಅವರ ಕಾಲಕ್ಕೆ ಅತ್ಯಂತ ಸಮೀಪವಿರುವ ಈ ಕೃತಿ ಬಹುಮಟ್ಟಿಗೆ ಅಧಿಕೃತವೆಂದೆ ಹೇಳಿದರೆ ತಪ್ಪಾಗಲಾರದು. ಕೈಲಾಸದಿಂದ

---

1 ಡಾ. ಎ.ಸಿ. ವಾಲಿ, ಸಂಜೀವಿನಿ, ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 61) 2012

2 ಡಾ. ಎ.ಸಿ. ವಾಲಿ, ಶಾಸನಗಳಲ್ಲಿ ಪಂಚಾಚಾರ್ಯರು ಮತ್ತು ಇತರ ಲೇಖನಗಳು ಅನುಪಮ ಪ್ರಕಾಶನ ಅಥಣಿ. (2015) (ಪು.ಸ. 49)

3 ಡಾ. ಎ.ಸಿ. ವಾಲಿ, 'ಸಂಜೀವಿನಿ' , ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 6)2012

4 ಡಾ. ಎ.ಸಿ. ವಾಲಿ, 'ಸಂಜೀವಿನಿ', ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 8) 2012

ಆರಂಭವಾಗುವ ಚರಿತ್ರೆಯು ದಾರುಕನನ್ನು ದಾಟಿದ್ದಕ್ಕಾಗಿ ಭೂಲೋಕದಲ್ಲಿ ಕೊಲ್ಲಿಪಾಕಿ ಸೋಮನಾಥನ ಲಿಂಗದಿಂದ ಸಿದ್ಧರೇವಣ'ಎಂಬ ನಾಮದಿಂದ ಬಂದಿರುವುದನ್ನು ತಿಳಿಸುತ್ತಾರೆ. ರೇವಣರು ಯಾಕೆ ಅವತರಿಸಿದರೆಂದರೆ ಲೋಕಮಂ ಪಾವನಂ ಮಾಡುವುದ್ಯೋಣೆದಿಂ ಎನ್ನುತ್ತಾರೆ. ಇಲ್ಲಿ ಜಗದ್ಗುರು ರೇವಣಸಿದ್ಧರು ತಾಯಿಯ ಗರ್ಭದಿಂದ ಬಂದವರಲ್ಲ, ಅವರು

ಜ್ಯೋತಿಯಿಂದಂ ಜ್ಯೋತಿಯೋಗೆದ ತೆರದಂತಾಗೆ
ಓತು ಪುಟ್ಟದನಯೇ ನಿಜನಿಳೆಗೆ ಪೋಸತಾಗೆ[5]

ಇಲ್ಲಿ ಅಯೋನಿಜ ಎಂಬ ಶಬ್ದವನ್ನು ಬಳಸಿರುವುದು ಗಮನಾರ್ಹ ಪಿಣ್ಣಾಕದೇವನಾಗಿ ವಿಷ್ಣು ಮೂರ್ತಿಯ ಅಲ್ಲಾಟ ನಿಲ್ಲಿಸಿದ್ದು. ಮಂಗಳವಾಡದ ಮಾಯೆಯ ಮನೆಯಲ್ಲಿ ಕೆಲವು ದಿನ ಇದ್ದು ಅವಳನ್ನು ಉದ್ಧರಿಸಿದ್ದು, ವೃಕ್ಷದಲ್ಲಿದ್ದ ರಾಕ್ಷಸವನ್ನು ಸಂಹಾರ ಮಾಡಿದ್ದು, ಬಿಜ್ಜಳನ ಗರ್ವಭಂಗ ಮಾಡಿದ್ದು, ಗೋರಖನಾಥನ ಸೊಕ್ಕಡಗಿಸಿದ್ದು ತಿಳಿಯಬಹುದಾಗಿದೆ.[6] ಹರಿಹರನ ಶಿಷ್ಯನೂ ಅಳಿಯನೂ ಆದ ರಾಘವಾಂಕನು ಸಿದ್ಧರಾಮ ಚರಿತ್ರೆ ಎಂಬ ಕೃತಿಯಲ್ಲಿ ರೇವಣಸಿದ್ಧರನ್ನು ಪ್ರಾಸಂಗಿಕವಾಗಿ ಸಿದ್ದರಾಮನ ಜನನ ಕುರಿತು ಭವಿಷ್ಯ ನುಡಿಯುವದನ್ನು ದಾಖಲಿಸಿದ್ದಾನೆ.

“ಶಿವಸಿದ್ಧನೀ ಪುರದೊಳಗೆ ಜನಿಸಿದವಪನಾತನಿಂದ
ಇದು ಲಿಂಗ ಬೀಡಾಗೆ ಸಿರಿಗೆ ಕರುವಾಗಿ ಪುಣ್ಯದ
ಪುಂಜವಾಗಿ ಮುಕ್ತಿ ಕ್ಷೇತ್ರವಾಗಿ ಧರ್ಮದ
ದಾನಿಯಾಗಿ ಧರೆಯರೆಯ
ಮರೆದಪ್ಪುದೀ ಸೊನ್ನಲಗೆ ಕೇಳೆಂದನು.[7]

ಹೀಗೆ ತಿಳಿಸಿ ದಂಪತಿಗಳಿಗೆ ಹರಸಿ ಅಲ್ಲಿಂದ ಮುಂದೆ ಸಾಗುತ್ತಾನೆ. ರೇವಣಸಿದ್ಧನಾಡಿ ತಪ್ಪುವನೆ ಎಂಬ ನುಡಿಯನ್ವಯ ಸಿದ್ಧರಾಮನ ಜನನವಾಗಿರುವುದನ್ನು ಕಾಣಬಹುದು.

ಜಾಲವಾದಿ ಮಲ್ಲಣ್ಣ (ಕ್ರಿ.ಶ. ಸುಮಾರು 1413) ಇಂದಿನ ಸಿಂದಿಗಿ ತಾಲೂಕಿನ ಜಾಲವಾದಿ ಗ್ರಾಮದ ಕವಿ, ಮಲ್ಲಣ್ಣನು ರೇವಣಸಿದ್ಧೇಶ್ವರ ಕಾವ್ಯ ಎಂಬ ಕೃತಿಯನ್ನು ರಚಿಸಿದ್ದಾರೆ. ಇದರಲ್ಲಿ 7 ಸಂಧಿ ೩೦೯ ಪದ್ಯಗಳಿರುವುದು ಕಂಡು ಬರುತ್ತದೆ. “ಹಳ್ಳಿಯ ಮುಗ್ದಕವಿಯಾಗಿರುವ ಇವರಿಗೆ ಚರಿತ್ರೆಯನ್ನು ತಿರುಚುವ ಯಾವುದೇ ಸ್ವಾರ್ಥಪೂರಿತ ಉದ್ದೇಶವಿಲ್ಲ ಬಹುಶಃ ಇದು ರೇವಣಸಿದ್ಧನ ನಿಜಚರಿತ್ರೆ ಎಂದು ಡಾ. ಎಂ.ಎಂ. ಕಲಬುರ್ಗಿಯವರ ನುಡಿ ಸರ್ವ ಸಮ್ಮತವಾದುದು”[8].

“ಕರದ ಲಾಕುಳ ಶಿರದ ಟೊಪ್ಪಿಗೆ
ಕೊರಳ ರುದ್ರಾಕ್ಷಿಗಳು ಭಸ್ಮವ
ಕರಿಯ ಕಂತೆಯು ಯೋಗವಟ್ಟಿಗೆ ಕರಕಮಂಡಲವು
ಚರಣದಲಿ ಹಾವುಗೆಯ ಮೆಟ್ಟದ
ತೆರಳಿ ಬಂದನು ತೊರೆಗೆ ಸಿದ್ಧನು” (ಸಂಧಿ 6 ಪದ್ಯ 1)[9]

ಅಂಬಿಗನಾದಂತಹ ಭೂತಯ್ಯ ನದಿಯನ್ನು ದಾಟಿಸಲು ನಿರಾಕರಿಸಿದನು. ಆಗ ರೇವಣಸಿದ್ಧ ತನ್ನ ಕಂಥೆಯನ್ನು ನೀರ ಮೇಲೆ ಹಾಸಿ ಅದರ ಮೇಲೆ ಕುಳಿತು ಸಾಗಿದಂತಹ ಪ್ರಸಂಗವವನ್ನು ಉಲ್ಲೇಖಿಸಲಾಗಿದೆ.

ಚತುರ್ಮುಖ ಬೊಮ್ಮರಸ ಜಗದ್ಗುರು ರೇವಣಸಿದ್ಧನನ್ನೆ ಕೃತಿಯ ನಾಯಕನನ್ನಾಗಿಸಿಕೊಂಡು ಈತ 'ರೇವಣಸಿದ್ದೇಶ್ವರ ಪುರಾಣಂ' ಎಂಬ ಕೃತಿಯನ್ನು ರಚಿಸಿದ್ದಾರೆ. ಅವರು ರಚಿಸಲ್ಪಟ್ಟ ಟಿಪ್ಪಣಿ ಹೀಗಿದೆ.

“ಆಂಧ್ರಪ್ರದೇಶದ ಕೊಲ್ಲಿಪಾಕಿಯೊಳು
ಶಿವಲಿಂಗದಿಂ ರೇವಣಾಸಿದ್ಧನಾಮಧೇ
ಯವ ಧರಿಸಿ ಪಾವನಂ ಮಾಡಲೆಮ್ಮಂ ಬಂದರೆಂದವರ್ಗೆ
ಮುನಿಪನುಸಿರ್ದಂ”[10]

ರೇವಣಸಿದ್ಧರ ಪುರಾಣ ರಚಿಸಲು ತನಗೆ ಈಶಾನ್ಯಶಿವ ಗುರುವಿನ ಸಂಸ್ಕೃತ ಕೃತಿ ಹಾಗೂ ಹರಿಹರನ ಕನ್ನಡದ ರಗಳೆ ಆಕರ ಗ್ರಂಥಗಳೆಂದು ತಿಳಿಸಿದ್ದಾನೆ. ದುರಾದೃಷ್ಟ ಈಶಾನ್ಯಶಿವ ಗುರುವಿನ ಕೃತಿ ಅಲಭ್ಯವಾಗಿದೆ.

ನಮ್ಮನ್ನೆಲ್ಲಾ ಪಾವನ ಮಾಡಲು ಆಂಧ್ರಪ್ರದೇಶದ ಕೊಲ್ಲಿಪಾಕಿ ಸೋಮೇಶನ ಲಿಂಗದಿಂದ ರೇವಣಸಿದ್ಧ ಬರುತ್ತಾನೆ, ಜಗತ್ತನ್ನು ಉದ್ದರಿಸಲೆಂದೆ ಬಂದವರೆಂದು ವಿವರಿಸಿದ್ದನ್ನು ಕಂಡು ಬರುತ್ತದೆ.

ಕಂಚಿಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಆಳುತ್ತಿದ್ದ ವಿಜಯೇಂದ್ರ ಚೋಳ ಜನಹಿತದಲ್ಲಿ ಆಸಕ್ತಿವಹಿಸದೇ ಹೋಗಿದ್ದನು. ಇದರಿಂದ ವೈಷ್ಣವರ ದಬ್ಬಾಳಿಕೆ ಹೆಚ್ಚಾಗಿ ಹೋಯಿತು, ಇತರೇ ಜನರಿಗೆ ಸಂಕಟ ಹೆಚ್ಚಾಯಿತು. ಆ ಸಂದರ್ಭದಲ್ಲಿ ಜಗದ್ಗುರು ರೇವಣಸಿದ್ಧರು 'ಪಿಣ್ಣಾಕನೈನಾರ್' ಎಂಬ ಹೆಸರು ಧರಿಸಿ ವೇಷ ಬದಲಿಸಿಕೊಂಡು ಸಾಮಾನ್ಯ ಜನರ ಮೇಲಾಗುವ ದಬ್ಬಾಳಿಕೆ ನಿಲ್ಲಿಸುತ್ತಾರೆ.

ಜಂಬೂರಿನ ದೋಸೆ ಪಿಟ್ಟವ್ವೆ ಎಂಬ ಶಿವಭಕ್ತಳ ಬದಲು ತಾವೇ ಕೆರೆ ಕಡೆಯುವ ಕಾಯಕ ಮಾಡಿ ಸೈ ಎಂದರು. ಮಂಗಳವಾಡದ ವಾರನಾರಿಯ ರಕ್ಷಣೆಗೈದವರಲ್ಲದೇ, ಬಸವಕಲ್ಯಾಣದ ಕಲ್ಲಿಶೆಟ್ಟಿ ಕುರುಡ ದಂಪತಿಗಳಿಗೆ ಕಣ್ಣನ್ನಿತ್ತು ಅವರಿಗೆ ಅಷ್ಟೈಶ್ವರ್ಯ ಕರುಣಿಸಿದ್ದನ್ನು ಕಾಣಬಹುದಾಗಿದೆ.

ಜಗದ್ಗುರು ರೇವಣಸಿದ್ಧರ ಜನಹಿತ ಕಾರ್ಯಗಳು ಸಿಂಧುವಿನೋಪಾದಿಯಲ್ಲಿರುವುದರಿಂದ ಈ ಲೇಖನವೆಂಬ ಬಿಂಧುವಿನಲ್ಲಿ ಕಟ್ಟಿಕೊಡುವುದು ದುಸ್ತರದ ಕಾರ್ಯ. ಒಟ್ಟಿನಲ್ಲಿ ಜಗದುದ್ಧಾರದ ಉದ್ಯೋಗವನ್ನು ಕೈಗೊಂಡು ಆಹಾರ-ನೀರಡಿಕೆಗಳ ಮೆಟ್ಟಿನಿಂತು, ಬಡವ- ಬಲ್ಲಿದರೆನ್ನದೇ ನ್ಯಾಯ ಸಮ್ಮೇತಗೊಳಿಸಿ ದೀನ-ದಲಿತರ, ದುಃಖ ದರಿದ್ರರ, ರೋಗಿ-ಯೋಗಿಯರ, ವೇಷ್ಯೇ ದಾಸರ, ಬಡವ-ಬಲ್ಲಿದರನ್ನು ಉದ್ದರಿಸುತ್ತ ಜನಹಿತ ಕಾರ್ಯದಲ್ಲಿ ತಲ್ಲೀನರಾಗಿರುತ್ತಿದ್ದರು.

ಜಗದ್ಗುರು ರೇವಣಸಿದ್ಧರು 'ನೋಡಿದುದೆ ಜಗತ್ಪಾವನಂ ಮುಟ್ಟಿದುದೇ ಪರುಷಂ, ಮೆಟ್ಟಿದುದೇ ದಿವ್ಯಕ್ಷೇತ್ರಂ, ನಡೆದುದುದೇ ಪುಣ್ಯಮಾರ್ಗ, ನಡಿದುದೇ ಪರಮತತ್ವಂ, ಇರ್ದುದೆ ದೇವಸಭೆ, ಸಾರ್ದುದೆ ಸುರತರುವೆನಿಪ್ಪ ನಿರ್ಮಳ ಕೀರ್ತಿಯಂ ಪಡೆದು ಶೈವ ಪ್ರತಾಪ ಸಿದ್ಧನನವರತ ನಿರ್ಮಳ ಕೀರ್ತಿಯಂ ಪಡೆದು ಶೈವ ಪ್ರತಾಪಸಿದ್ಧನನವರತ ಧರ್ಮತತ್ವರಂ'[11] ಎಂಬ ಹರಿಹರನ ವಾಣಿಯು ಅಕ್ಷರಸಹ ಸತ್ಯವಾಗಿರುವುದನ್ನು ತಿಳಿಯಬಹುದಾಗಿದೆ.

[5] ಡಾ. ಎ.ಸಿ. ವಾಲಿ, 'ಸಂಜೀವಿನಿ', ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 42) 2012

[6] ರಾಘವಾಂಕ ಸಿದ್ದರಾಮ ಚಾರಿತ್ರ (ಸಂ) ಡಾ. ಎಂ.ಬಿ. ನೇಗಿನಹಾಳ ಗದಗ ವೀರಶೈವ ಅಧ್ಯಯನ ಸಂಸ್ಥೆ (ಪು.ಸಂ. 9) 2010

[7] ಡಾ. ಎ.ಸಿ. ವಾಲಿ, 'ಸಂಜೀವಿನಿ, ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 42) 2012

[8] ಡಾ. ಎ.ಸಿ. ವಾಲಿ, 'ಸಂಜೀವಿನಿ' , ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 44) 2012

[9] ಡಾ. ಎ.ಸಿ. ವಾಲಿ, 'ಸಂಜೀವಿನಿ', ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 44) 2012

[10] ಡಾ. ಎ.ಸಿ. ವಾಲಿ, 'ಸಂಜೀವಿನಿ' , ಪ್ರಸಾರಾಂಗ, ಶ್ರೀಮದ್ವೀರಶೈವ ಸದ್ಬೋಧನ ಸಂಸ್ಥೆ (ರಿ)ಶ್ರೀ. ಜಗದ್ಗುರು ರಂಭಾಪುರಿ ವೀರಸಿಂಹಾಸನ ಮಹಾ ಸಂಸ್ಥಾನಮಠ ಬಾಳೆಹೊನ್ನೂರು (ಪು.ಸ 46)2012.

[11] ಡಾ. ಎ.ಸಿ. ವಾಲಿ, ಶಾಸನಗಳಲ್ಲಿ ಪಂಚಾಚಾರ್ಯರು ಮತ್ತು ಇತರ ಲೇಖನಗಳು ಅನುಪಮ ಪ್ರಕಾಶನ ಅಥಣಿ. (2015) (ಪು.ಸ. 52)